ಅಸಲು ದಾವಾ ಸಂ. 95 ಃ 2010

ಡಿ.ಡಬ್ಲ್ಯೂ. 1

ಪ್ರಃಮಾಃದಿಃ 24-04-2017.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಶ್ರೀ ಕೆ ಜಿ ಎಂ ವಕೀಲರಿಂದಃ-

ಈ ಕೇಸಿನ ಎಲ್ಲಾ ಮಾಹಿತಿಯನ್ನು ನನ್ನ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ. ಪ್ರಮಾಣ ಪತ್ರ ಹಾಕಲು ಮಾಹಿತಿಯನ್ನು ನಮ್ಮ ವಕೀಲರು ಕೊಟ್ಟಿರುತ್ತಾರೆ. ಈ ಕೇಸಿನ ವಾದಿಯರ ಎಲ್ಲರ ಹೆಸರು ಹೇಳಲಾಗುವುದಿಲ್ಲ. ಪ್ರತಿವಾದಿಯರು ನಾನು ಆಂಜನೇಯ ಶೆಟ್ಟಿ, ಸುರೇಶಶೆಟ್ಟಿ, ಮಂಜುನಾಥಶೆಟ್ಟಿ, ಚನ್ನಪ್ಪ, ಸೋಮಶೇಖರಪ್ಪ, ರತ್ನಮ್ಮ, ಗೌರಮ್ಮ ಮತ್ತು ಇತರರು ಇರುತ್ತಾರೆ. ಪ್ರತಿವಾದಿಗಳಲ್ಲಿ ರತ್ನಮ್ಮ, ಪ್ರೇಮಮ್ಮ ಎಂಬುವವರು ತೀರಿಕೊಂಡಿರುತ್ತಾರೆ. ನನ್ನ ಪರವಾಗಿ ಒಬ್ಬರೇ ನ್ಯಾಯವಾದಿಗಳನ್ನು ಇಟ್ಟುಕೊಂಡಿರುತ್ತೇನೆ. ನನ್ನ ವಕೀಲರ ಹೆಸರು ರಂಗನಾಥ. ಪ್ರತಿವಾದಿ 1 ರವರು ಒಟ್ಟು 6 ಜನ ಸೇರಿ ಒಬ್ಬರೇ ನ್ಯಾಯವಾದಿಗಳನ್ನು ಇಟ್ಟುಕೊಂಡಿರುತ್ತೇವೆ. ಪ್ರತಿವಾದಿ ನಂ.1ರಿಂದ 4 ಮತ್ತು 8 ರಿಂದ 12 ಒಬ್ಬರೇ ನ್ಯಾಯವಾದಿಗಳನ್ನು ನೇಮಕ ಮಾಡಿಕೊಂಡಿದ್ದೇವೆ ಎಂದರೆ ಸರಿ. 1ನೇ ಪ್ರತಿವಾದಿ ನನ್ನ ಮಾವನ ಮಗನಾಗಬೇಕು. ಪ್ರತಿವಾದಿ 2 ಮತ್ತು 1 ಇಬ್ಬರೂ ಅಣ್ಣತಮ್ಮಂದಿರು ಅವರು ನನಗೆ ಮಾವನಾಗಬೇಕು. ಸುರೇಶ್‌ಶೆಟ್ಟಿ, ಮಂಜುನಾಥಶೆಟ್ಟಿ ನನ್ನ ಚಿಕ್ಕಪ್ಪನ ಮಕ್ಕಳಾಗಬೇಕು. ಪ್ರತಿವಾದಿ 5 ಸಬಂಧಿ ಅಲ್ಲ, ಅವರು ನಮ್ಮಊರಿನವರು ಎಂದರೆ ಸರಿ. ಅವರು ಈಗ ತೀರಿಕೊಂಡಿರುತ್ತಾರೆ. ಅವರ ಹೆಂಡತಿ ನಾಗರತ್ನಮ್ಮಗೊತ್ತು, 6ನೇ ಪ್ರತಿವಾದಿ ನನಗೆ ಪರಿಚಯ. ಪ್ರತಿವಾದಿಯರು ನನಗೆ ಸಂಬಂಧಿಯಲ್ಲ, ರತ್ನಮ್ಮ ನನಗೆ ಚಿಕ್ಕಪ್ಪನ ಹೆಂಡತಿಯಾಗಬೇಕು. ಅವರು ಈಗ ಜೀವಂತವಾಗಿಲ್ಲ, ಅವರಿಗೆ 4 ಜನ ಗಂಡು ಮಕ್ಕಳು ಒಬ್ಬರು ಹೆಣ್ಣು ಮಗಳು. ರತ್ನಮ್ಮನ ಮಗ ಶ್ರೀನಿವಾಸಶೆಟ್ಟರು ಗೊತ್ತು, ಹನುಮಂತಶೆಟ್ಟರು ಮಗ ಗೊತ್ತು, ನಾವು ಪ್ರತಿವಾದಿಗಳು ಒಂದೇ ಕುಟುಂಬದಲ್ಲಿ ವಾಸ ಇಲ್ಲ ಎಂದರೆ ಸರಿ.

ನಮ್ಮ ಗ್ರಾಮದಲ್ಲಿ ಇರುವ ಉಡೇವು ಅದು ಸರ್ಕಾರದ ಆಸ್ತಿ ಎಂದರೆ ಗೊತ್ತಿಲ್ಲ. ಈ ದಾವಾದಲ್ಲಿರುವ ಆಸ್ತಿ ನಂ. 58, 61, 59, 73, 74, 141ರ ಬಗ್ಗೆ ನನಗೆ ಮಾಹಿತಿ ಇಲ್ಲ, ದಾವಾದ ಸಮನ್ಸ್ ಜಾರಿಯಾದ ಮೇಲೆ ದಾವಾದ ಮಾಹಿತಿ ಓದಿ ತಿಳಿದುಕೊಂಡಿರುತ್ತೇನೆ. ನಮ್ಮ ವಿರುದ್ದ ಏನು ಕೇಸು ಹಾಕಿದ್ದಾರೆ ಅಂತ ವಕೀಲರ ಮೂಲಕ ತಿಳಿದುಕೊಂಡಿರುತ್ತೇವೆ. ಮೇಲೆ ಹೇಳಿದ ನಂಬರ್‌ಗಳ ಮೇಲೆ ಕೇಸು ಹಾಕಿದ್ದಾರೆ ಅಂತ ತಿಳಿಸಿದರು. ಏಕೆ ದಾವಾ ಹಾಕಿದ್ದಾರೆ ಅಂತ ಮತ್ತೆ ಮಾಹಿತಿ ತಿಳಿದುಕೊಂಡಿಲ್ಲ, ನಮ್ಮ ಊರಿನ ಮತದಾರರ ಪಟ್ಟಿಗಳು ಸುಮಾರು ಇರುತ್ತವೆ. ನಮ್ಮ ವಾರ್ಡಿನ ಸಂಖ್ಯೆ ಗೊತ್ತು, ನಿಪಿ-22 ರ ಮತದಾರರ ಪಟ್ಟಿಯಲ್ಲಿ ಕ್ರಮ ಸಂಖ್ಯೆ 735 ನನ್ನದೇ ಮತದಾರರ ಪಟ್ಟಿ ಎಂದರೆ ಸರಿ. ನಿಪಿ-1 ರಲ್ಲಿ ಖಾನೆಶುಮಾರಿ ನಂ.58 ನಮ್ಮಊರಿನ ವಿನಾಯಿತಿ ಸರ್ಕಾರಿ ಸ್ಕೂಲ್ ಮನೆ ಅಂತ ಇದೆ ಎಂದರೆ ಸರಿ. ಅದೇ ರೀತಿಯಾಗಿ ಖಾನೆಶುಮಾರಿ ನಂ.59ರಲ್ಲಿ ವಿನಾಯಿತಿ ಸರ್ಕಾರಿ ಬಂಜರು ಅಂತ ಇದೆ ಎಂದರೆ ಸರಿ. ಸಾಕ್ಷಿಗೆ ನಿಪಿ-1ರ ದಾಖಲೆ ತೋರಿಸಿ ಆಸ್ತಿ ಸಂಖ್ಯೆ 61 ವಿನಾಯಿತಿ ಸರ್ಕಾರಿ ಬಂಜರು ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅಲ್ಲಿ ಇದೆ ಆದರೆ ಅದು ಸರ್ಕಾರಿ ಆಸ್ತಿ ಅಲ್ಲ ಎನ್ನುತ್ತಾರೆ. ದಾಖಲೆಯಲ್ಲಿ ಇರುವ ಮಾಹಿತಿ ಸರಿ ಅಥವಾ ಸುಳ್ಳು ಅಂತ ನನಗೆ ಹೇಳಲಾಗುವುದಿಲ್ಲ, ಖಾನೆಶುಮಾರಿ ನಂ.73 ಸರ್ಕಾರಿ ವಿನಾಯಿತಿ ಬಂಜರು ಬರೆದಿರುವ ದಾಖಲೆ ನಿಪಿ-2 ಸುಳ್ಳು. ನಿಪಿ-2 ರಲ್ಲಿ ಖಾನೆಶುಮಾರಿ ನಂ.74 ಸರ್ಕಾರಿ ವಿನಾಯಿತಿ ಬಂಜರು ಅಂತ ದಾಖಲೆಯಲ್ಲಿ ಇದೆ ಆದರೆ ನನಗೆ ಗೊತ್ತಾಗುವುದಿಲ್ಲ, ನಮ್ಮ ಗ್ರಾಮದ ಉಡೇವಿನ ಸುತ್ತಲೂ ಇರುವ ಜಾಗದಲ್ಲಿ ಪ್ರತಿವಾದಿ 1 ರಿಂದ 12 ರವರು ವಾಸಿಸುತ್ತಿದ್ದೇವೆ ಎಂದರೆ ಸರಿ.

ನಮಗೆ ಸಂಬಂದಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇವೆ. ನಿಡಿ-1 ರಿಂದ 7, ರ ದಾಖಲೆಗಳು ದಾವಾ ಆಸ್ತಿಗೆ ಸಂಬಂದ ಇಲ್ಲ ಎಂದರೆ ಸರಿ. ನಿಡಿ-8ರ ದಾಖಲೆ ನಾರಾಯಣಶೆಟ್ಟಿ ಇವರಿಗೆ ಸೇರಿರುತ್ತದೆ.ಸದರಿ ಪತ್ರದಲ್ಲಿ ಚೆಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ಬಂಜರು ಅಂತ ಬರೆದಿದ್ದು ಉಡೇವಿಗೆ ಸಂಬಂದಪಟ್ಟದ್ದು ಎಂದರೆ ಸರಿಯಲ್ಲ. ಚೆಕ್ಕುಬಂದಿ ಹೇಳಲು ತಪ್ಪಿಸಿಕೊಳ್ಳುವಗೋಸ್ಕರ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ಉತ್ತರಕ್ಕೆ ಇರುವ ಆಸ್ತಿಯು ಉಡೇವುಗೆ ಸಂಬಂದಪಟ್ಟ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನಿಡಿ-9 ರ ದಾಖಲೆಯು ದಾವಾ ಸಂಬಂದಪಟ್ಟಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾವು ಕರ ಕಟ್ಟಿಕೊಂಡು ಬಂದಿರುತ್ತೇವೆ ಎನ್ನುತ್ತಾರೆ. ನಿಡಿ-9 ರಿಂದ 11ರ ದಾಖಲೆಗಳು ದಾವಾ ಆಸ್ತಿಗೆ ಸಂಬಂದ ಇಲ್ಲ ಎಂದರೆ ಸರಿ. ನಿಡಿ-12 ರ ಕ್ರಯಪತ್ರವು ದಾವಾ ಆಸ್ತಿಗೆ ಸಂಬಂದಪಟ್ಟಿಲ್ಲ ಎಂದರೆ ಸರಿ. ನಿಡಿ-16 ರ ದಾಖಲೆ ದಾವಾ ಆಸ್ತಿಗೆ ಸಂಬಂದ ಇಲ್ಲ ಎಂದರೆ ಸರಿ. ನಿಡಿ-17 ರ ದಾಖಲೆ ದಾವಾ ಆಸ್ತಿಗೆ ಸಂಬಂದ ಇಲ್ಲ ಎಂದರೆ ಗೊತ್ತಿಲ್ಲ. ಎಲ್ಲಾ ದಾಖಲೆಗಳನ್ನು ನನ್ನ ಪ್ರಮಾಣ ಪತ್ರದೊಂದಿಗೆ ವಕೀಲರಿಗೆ ಮಾಹಿತಿ ಕೊಟ್ಟು ಹಾಕಿದ್ದೇನೆ ಎಂದರೆ ಸರಿ. ಸ್ವಲ್ಪ ಮಟ್ಟಿಗೆ ಗೊತ್ತಿದೆ. ಈ ಕೇಸಿನ ಆಸ್ತಿಗೂ ಹಾಗೂ ಹಾಜರುಪಡಿಸಿರುವ ದಾಖಲೆಗಳಿಗೂ ಸಂಬಂದ ಇಲ್ಲ ಎಂದರೆ ಸರಿ. ನಿಡಿ-18 ರ ವಾದಿ ನಂ.4 ರ ರವರ ವಕಾಲತ್‌ನ ದೃಡೀಕೃತ ನಕಲನ್ನು ಅನಗತ್ಯವಾಗಿ ಈ ದಾವೆ ಹಾಕಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ಅಣ್ಣಹಾಕಿದ್ದಾರೆ ಎನ್ನುತ್ತಾರೆ. ನನ್ನ ಅಣ್ಣ ಈ ದಾವೆಯಲ್ಲಿ ಪಕ್ಷಗಾರರಿಲ್ಲ. ನಿಡಿ-19 ಮತ್ತು 20ರ ದಾಖ್ಲೆಗಳನ್ನು ನನ್ನ ಅಣ್ಣ ಹೇಳಿ ದಾಖಲಿಸಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಹೇಳಿಕೊಟ್ಟದ್ದರಿಂದ ಎಲ್ಲಾ ದಾಖ್ಲೆಗಳ ಬಗ್ಗೆ ಗೊತ್ತಾಗಿದ್ದು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ದಾವಾ ಆಸ್ತಿ ಒತ್ತುವರಿ ಮಾಡಿಲ್ಲ ಎಂದು ಸಾಬೀತುಪಡಿಸುವ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-22 ರ ಮತದಾರರಪಟ್ಟಿ ತೋರಿಸಿ ನಿಮ್ಮ ಗ್ರಾಮದ ಸರ್ಕಾರಿ ಉಡೇವು ಕಾಣುವ ನಕ್ಷೆ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಕಾಣುತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆಒಂದು ಜೆರಾಕ್ಸ್‌ನಕ್ಷೆ ತೋರಿಸಿ ಮತ್ತು ನ್ಯಾಯಾಲಯದ ಮುಂದೆ ಇರುವ ನಿಪಿ-22 ರ ಲಗತ್ತಿರುವ ನಕ್ಷೆ ತೋರಿಸಿ ಕೋಟೆ ಮತ್ತು ಸರ್ಕಾರಿ ಉಡೆ ಅಂತ ತೋರಿಸಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಎರಡೂ ಒಂದೇಎಂದು ಹೇಳುತ್ತಾರೆ. ಸದರಿ ದಾಖಲೆ ಜೆರಾಕ್ಸ್ ಆಗಿರುವುದರಿಂದ ಗುರ್ತು ಹಾಕಲು ಬರುವುದಿಲ್ಲ. ಉಡೇವಿನ 4 ಚಕ್ಕುಬಂದಿಯ ಸುತ್ತ ಮುತ್ತ ವಿಶಾಲವಾಗಿ ಓಡಾಡುವ ರಸ್ತೆ ಎಂದು ಸದರಿ ನಕ್ಷೆಯಲ್ಲಿ ತೋರಿಸಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು 1916 ರಿಂದ ಖರೀದಿ ಮಾಡಿದಾಗಿನಿಂದ ವಾಸ ಇದ್ದು ರಸ್ತೆ ಇರುವುದಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸ್ವಲ್ಪ ದೂರ ಮಾತ್ರ ರಸ್ತೆ ಇದೆ ಎನ್ನುತ್ತಾರೆ. ಪ್ರತಿವಾದಿ 14 ಮತ್ತು 15 ರವರು ಉಡೇವಿನ ಸುತ್ತ ಇರುವ ಜಾಗದ ಉಸ್ತುವಾರಿಯನ್ನು ಸರಿಯಾಗಿ ನೋಡಿಕೊಳ್ಳದೇ ಇರುವ ಕಾರಣ ಪ್ರತಿವಾದಿ 1 ರಿಂದ 12 ರವರು ಅತಿಕ್ರಮಣ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರು ಸಾರ್ವಜನಿಕರ ಹಿತಾಸಕ್ತಿಗಾಗಿ ಉಡೇವಿನ ಸುತ್ತ ಇರುವ ಜಾಗವು ಸರ್ಕಾರದ್ದು ಅಂತ ಲೋಕಾಯುಕ್ತರವರಿಗೆ ಅರ್ಜಿ ಹಾಕಿಕೊಂಡಿರುವ ವಿಷಯ ನನಗೆ ಗೊತ್ತಿದೆ. ಸಾಕ್ಷಿ ಮುಂದುವರೆದು ಗೊತ್ತಿಲ್ಲ ಎನ್ನುತ್ತಾರೆ. ಲೋಕಾಯುಕ್ತ ಡಿವೈಎಸ್‌ಪಿ ಸ್ಥಳ ತನಿಖೆಗೆ ಬಂದಾಗ ನಾನು ಸುರೇಶ್ ಶೆಟ್ಟಿ ಹಾಜರಿದ್ದು ಒತ್ತುವರಿ ಮಾಡಿದ್ದು ನಿಜ ಇರುತ್ತದೆ ಅಂತ ಹೇಳಿಕೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಿದೆ

ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾಳಿ